ದಿನಾಂಕ: **24-02-2023** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.

ಮುಖ್ಯವಿಚಾರಣೆ: ವಾದಿ ಪರ ಶ್ರೀ ಎಂ ಎಸ್ ಬಿ ವಕೀಲರಿಂದ:

ನಾನು ಈ ದಾವೆಯಲ್ಲಿ ವಾದಿ ಇದ್ದು, ನನ್ನ ಸಾಕ್ಷ್ಯದ ಮುಖ್ಯವಿಚಾರಣೆಯಾಗಿ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ . ಪ್ರಮಾಣಪತ್ರದಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿದೆ ಮತ್ತು ಸತ್ಯವಾಗಿದೆ.

ಕ್ರಯ ಕರಾರುಪತ್ರವನ್ನು ನಿಪಿ1 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ1 (ಎ) ರಿಂದ ನಿಪಿ 1(ಎಫ್) ಎಂದು, ಪ್ರತಿವಾದಿಯ ಸಹಿಗಳನ್ನು ನಿಪಿ (ಜಿ)ರಿಂದ ನಿಪಿ 1(ಎಲ್) ಎಂದು, ಸಾಕ್ಷಿದಾರರಾದ ಹೆಚ್ ಎಂ ನಟರಾಜ್ ಮತ್ತು ಎಂ ಎಂ ಪ್ರಭಾಕರ ಕಾರಂತ್ ರವರ ಸಹಿಗಳನ್ನು ನಿಪಿ 1(ಎಂ) ಮತ್ತು ನಿಪಿ 1(ಎನ್) ಎಂದು, ಸ.ನಂ. 187/1 ಮತ್ತು ಸ.ನಂ.187/2 ರ ಪಹಣಿಗಳನ್ನು ನಿಪಿ 2 ಮತ್ತು ನಿಪಿ 3 ಎಂದು, ಸ,ನಂ. 187/1 ರ ಮ್ಯುಟೇಶನ್ ರಿಜಿಸ್ಟರಿನ ಪ್ರತಿಯನ್ನು ನಿಪಿ 4 ಎಂದು, 187/2 ರ ಮ್ಯುಟೇಶನ್ ರಿಜಿಸ್ಟರಿನ ಪ್ರತಿಯನ್ನು ನಿಪಿ 5 ಎಂದು, ದಿನಾಂಕ:25-10-2019 ರ ಲೀಗಲ್ ನೋಟೀಸಿನ ಕಚೇರಿ ಪ್ರತಿಯನ್ನು ನಿಪಿ 6 ಎಂದು, ಅಂಚೆ ಲಕೋಟೆಯನ್ನು ನಿಪಿ 7 ಎಂದು, ದಿನಾಂಕ:07-03-2020 ರ ಲೀಗಲ್ ನೋಟೀಸಿನ ಕಚೇರಿ ಪ್ರತಿಯನ್ನು ನಿಪಿ 8 ಎಂದು, ಅಂಚೆ ಲಕೋಟೆಯನ್ನು ನಿಪಿ 9 ಎಂದು, ಬ್ಯಾಂಕ್ ಅಕೌಂಟ್ ಸ್ಟೇಟ್ಮೆಂಟನ್ನು ಪ್ರತಿವಾದಿಯ ಪರ ವಕೀಲರ ಆಕ್ಷೇಪಣೆ ಮೇರೆಗೆ ನಿಪಿ 10 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು ನೀಡಲಾಗಿದೆ.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು: ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿ: